The Hon'ble Sri R. CHENNIGARAMIAH.—Government have not yet taken up any such schemes.

Sri G. VEERAPPA.—At least now do the Government think that the introduction of such measures as monogomy and birth control will control the growth of population?

The Hon'ble Sri R. CHENNIGARAMIAH.—It is a good suggestion.

Sri G. VEERAPPA.—I want to know whether the Government would consider the introduction of these measures?

The Hon'ble Sri R. CHENNIGARAMIAH.—Government have not yet taken up this question for consideration.

Sri D. H. CHANDRASEKHARAIYA (Chitaldrug District—General).—Do the Government consider that the growth of population is good for the country?

The Hon'ble Sri R. CHENNIGARAMIAH.—It is both good and bad for the country.

Sri D. H. CHANDRASEKHARAIYA.—Is it not necessary that the Government should have definite view in regard to checking the growth or otherwise of population?

Rajamantrapravina H. B. GUNDAPPA GOWDA (Hassan District—General).—Has the Hon'ble Member putting the question come to any decision? (laughter)

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).— ಪ್ರಜಾಸಂಖ್ಯೆ ಹೆಚ್ಚುತ್ತಿರುವುದು ಶುಭ ಸೂಚನೆ ಎಂದು ಸರ್ಕಾರದವರು ಭಾವಿಸುತ್ತಾರೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಶುಭ.....ಸೂಚನೆ.....ಹೌದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಪ್ರಜಾ ಸಂಖ್ಯೆಯ ಬೆಳವಣಿಗೆಯನ್ನು ತಡೆಗಟ್ಟುವುದು ಸಾಧ್ಯವಲ್ಲವೆಂಬುದು ಸರ್ಕಾರದ ಗಮನದಲ್ಲಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಯಾವುದೂ ಸರ್ಕಾರದ ಗಮನದಲ್ಲಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಪ್ರಜಾಸಂಖ್ಯೆಯನ್ನು ಕಡಿಮೆ ಮಾಡಲು ಮಕ್ಕಳು ಹೆಚ್ಚಾಗಿರುವವರ ಮೇಲೆ ಕಂದಾಯ ಹಾಕುವುದೇನಾದರೂ ಯೋಚನೆಯಿಲ್ಲದೆಯೆ? (ನಗು.)

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಮಕ್ಕಳಿಲ್ಲದೇ ಇರುವವರ ಮೇಲೆ ಕಂದಾಯ ಹಾಕುವುದನ್ನು ಕೆಲವು ಕಡೆ ಯೋಚನೆ ಮಾಡುತ್ತಿದ್ದಾರೆ. (ನಗು.)

Survey of illiteracy in the State.

*ಪ್ರಶ್ನೆ 16.—ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಡಿಸ್ಟ್ರಿಕ್ಟ್ ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಸಂಸ್ಥಾನದಲ್ಲಿ ಎಷ್ಟು ಮಂದಿ ಅನಕ್ಷರಸ್ಥರಿದ್ದಾರೆ;

(b) ಸಂಸ್ಥಾನದಲ್ಲಿರುವ ಅನಕ್ಷರಸ್ಥರ ಸಂಖ್ಯೆ ಎಷ್ಟೆಂಬುದನ್ನು ಸರ್ಕಾರದವರು "ಸರ್ವೆ" ಪರಿಶೀಲನೆ ಮಾಡಿಸಿ ತಿಳಿದಿರುವರೆ; ಮತ್ತು ಈ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದಕ್ಕೆ ಎಷ್ಟು ಕಾಲ ಹಿಡಿಯಬಹುದು?

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು) On behalf of. [ಮಾನ್ಯ ಶ್ರೀ ಕೆ. ಚಂಗಲರಾಯರೆಡ್ಡಿಯವರು] (ಪ್ರಧಾನ ಸಚಿವರು).

(a) 1941ನೆಯ ಇಸವಿಯ ಜನಗಣತಿಯ ಮೇರೆಗೆ ಅನಕ್ಷರಸ್ಥರು ಜನಸಂಖ್ಯೆಯಲ್ಲಿ ಶೇಕಡಾ 87 ಭಾಗದಷ್ಟು ಇದ್ದರು. ಈಗ ಶೇಕಡಾ ಯಾವ ಭಾಗದಷ್ಟು ಜನರು ಇನ್ನೂ ಅನಕ್ಷರಸ್ಥರಾಗಿದ್ದಾರೆಂಬುದು 1951 ನೆಯ ಇಸವಿಯ ಜನಗಣತಿಯ ಲೆಕ್ಕಗಳನ್ನು ಪೂರ್ತಿ ಮಾಡಿದ ನಂತರ ತಿಳಿಯುತ್ತದೆ.

(b) "ಸರ್ವೆ" ಪರಿಶೀಲನೆ ಮಾಡಿಸಿದ್ದಾರೆ. 1941ನೆಯ ಇಸವಿಯಲ್ಲಿ, ವಯಸ್ಕರ ಶಿಕ್ಷಣ ಸಮಿತಿಯವರು (ಆಡಲ್ಟ್ ಎಜ್ಯುಕೇಶನ್ ಕಮಿಟಿಯವರು) ಕೆಲಸ ಪ್ರಾರಂಭಮಾಡಿದ ತರುಣದಲ್ಲಿ ಅನಕ್ಷರತೆಯನ್ನು ನಿರ್ಮೂಲ ಮಾಡುವುದಕ್ಕಾಗಿ ಒಂದು ಯೋಜನೆಯನ್ನು ತಯಾರಿಸಲಾಯಿತು. ಆ ಯೋಜನೆಯ ಮೇರೆಗೆ, ಸಂಸ್ಥಾನದಲ್ಲಿ (12 ವರ್ಷಕ್ಕೆ ಮೇಲ್ಪಟ್ಟು 40 ವರ್ಷಕ್ಕಿಂತ ಕಡಮೆ ವಯಸ್ಸಿನವರಾಗಿ) ಅನಕ್ಷರಸ್ಥರಾಗಿದ್ದು ಓದಬರಹಗಳನ್ನು ಕಲಸಬಹುದಾಗಿದ್ದವರು, 13·1 ಲಕ್ಷ ಮಂದಿ ಗಂಡಸರು. ಮತ್ತು 15·5 ಲಕ್ಷ ಮಂದಿ ಹೆಂಗಸರು. ಕಳೆದ ಹತ್ತು ವರ್ಷಗಳಲ್ಲಿ ಮೇಲೆ ಕಂಡ ಸಮಿತಿಯವರು ಸುಮಾರು 2½ ಲಕ್ಷ ಮಂದಿ ಮನುಷ್ಯರನ್ನು ಅಕ್ಷರಸ್ಥರನ್ನಾಗಿ ಮಾಡಿದ್ದಾರೆ.

ಅನಕ್ಷರತೆಯನ್ನು ನಿರ್ಮೂಲ ಮಾಡುವುದಕ್ಕೆ ಹಿಡಿಯಬಹುದಾದ ಕಾಲದ ವಿಷಯದಲ್ಲಿ, ಆ ಸಮಿತಿಯವರ ಯೋಜನೆಯ ಮೇರೆಗೆ ಆ ಕೆಲಸವನ್ನು ಸಾಧಿಸುವುದಕ್ಕೆ ಸುಮಾರು 10 ವರ್ಷಗಳು ಹಿಡಿಯಬಹುದೆಂದು ಹೇಳಬಹುದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಸಂಸ್ಥಾನದಲ್ಲಿ ಇಷ್ಟು ಜನ ವಿದ್ಯಾವಂತರಲ್ಲವೆಂದು ತಿಳಿಸಿದೆ; ಅವರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಕೈಗೊಂಡಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.— ಸರ್ಕಾರದವರು ಎಷ್ಟು ಹಣವನ್ನೊದಗಿಸಬಹುದೋ ಅಷ್ಟನ್ನೂ ಓದಗಿಸಿ ವಿದ್ಯಾಭ್ಯಾಸವನ್ನು ಮುಂದುವರಿಸಲು ಪ್ರೈಮರಿ ಸ್ಕೂಲುಗಳನ್ನು ಜಾಸ್ತಿ ಮಾಡಿದ್ದಾರೆ; ವಯಸ್ಕರ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದೇವೆ; ಹೀಗೆ ನಾನಾ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೇವೆ. ಇದೇ ರೀತಿ ಮುಂದುವರಿಸಿಕೊಂಡು ಹೋದರೆ ಹತ್ತು ವರ್ಷಗಳಲ್ಲಿ ಎಷ್ಟು ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತದೆಂಬುದು ಈ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.— ವಿದ್ಯಾವಂತರ ಸಂಖ್ಯೆ ಈಗ ಎಷ್ಟಾಗಿದೆ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ಈಗ ಶೇಕಡ 20·5 ರಷ್ಟಾಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಪ್ರಜಾ ಪ್ರಭುತ್ವದಲ್ಲಿ ವಯಸ್ಕರ ಮತದಾನ ಪದ್ಧತಿಯಮೇರೆಗೆ ಚುನಾವಣೆಗಳನ್ನು ನಡೆಸುತ್ತೇವೆಂದು ಹೇಳುವಾಗ ಎಲ್ಲರೂ ವಿದ್ಯಾವಂತರಾಗುವುದು ಅವಶ್ಯಕವಲ್ಲವೆ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ನಾನೇ ಎಷ್ಟೋಸಾರಿ ಹೇಳಿದ್ದೇನೆ, ಎಲ್ಲರೂ ವಿದ್ಯಾವಂತರಾಗುವುದು ದೇಶಕ್ಕೆ ಒಳ್ಳೆಯದು ಎಂದು.

ಶ್ರೀ ಎಚ್. ಸಿ ಲಿಂಗಾರೆಡ್ಡಿಯವರು.—ಒಂದು ಯೋಜನೆ ತಯಾರಾಗಿದೆಯೆಂದು ಹೇಳಿದ್ದೀರಿ; ಅದು ಯಾವ ಯೋಜನೆ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ವಯಸ್ಕರ ಶಿಕ್ಷಣ, ಪ್ರೈಮರಿ ಸ್ಕೂಲುಗಳನ್ನು ಹೆಚ್ಚಿಸುವುದು, ಖಾಸಗಿ ವಿದ್ಯಾಸಂಸ್ಥೆಗಳನ್ನು ಹೆಚ್ಚಿಸುವುದು ಮುಂತಾದ ವಿಷಯಗಳೆಲ್ಲವೂ ಇವೆ. ಇದನ್ನು ವಿದ್ಯಾ ಇಲಾಖೆಯವರೂ, ಖಾಸಗಿ ವಿದ್ಯಾ ಸಂಸ್ಥೆಗಳವರೂ ಎಲ್ಲರೂ ಸೇರಿ ಯೋಚನೆಮಾಡಿ ಮಾಡಬೇಕಾಗಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).— 1941ನೆಯ ಇಸವಿಯ ಜನಗಣತಿ ಲೆಕ್ಕದ ಪ್ರಕಾರ ವಯಸ್ಕರ ಪೈಕಿ ಇನ್ನೂ 30 ಲಕ್ಷ ಜನರಿದ್ದಾರಲ್ಲವೆ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ಹೌದು.

ಶ್ರೀ ಬಿ. ಹುಚ್ಚೇಗೌಡರು.—ಅವರನ್ನೆಲ್ಲಾ ಇನ್ನು ಹತ್ತು ವರ್ಷಗಳೊಳಗೆ ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಯಾವ ಯೋಜನೆ ಮಾಡಿದ್ದೀರಿ?

ಮಾನ್ಯ ಶ್ರೀ ಆರ್ ಚನ್ನಿಗರಾಮಯ್ಯನವರು.— ಇಷ್ಟೇ ವರ್ಷದಲ್ಲಿ ಎಂದು ಕಡ್ಡಾಯವಾಗಿ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ 1941ನೆಯ ಜನಗಣತಿಯಾಗಿದ್ದುದಕ್ಕಿಂತ 1951ರಲ್ಲಿ ಎಷ್ಟು ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗಿದೆ ಎಂಬುದು ಲೆಕ್ಕಾಚಾರದಿಂದ ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಅನಕ್ಷರತೆಯನ್ನು ಇನ್ನು ಹತ್ತು ವರ್ಷಗಳಲ್ಲಿ ನಿರ್ಮೂಲ ಮಾಡಲು ಯಾವುದಾದರೂ ಒಂದು ಯೋಜನೆಯನ್ನು ತಯಾರಿಸಿದ್ದೀರಾ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ವಯಸ್ಕರ ವಿದ್ಯಾಭ್ಯಾಸ, ಪ್ರೈಮರಿ ಸ್ಕೂಲುಗಳನ್ನು ಹೆಚ್ಚಿಸುವುದು ಮತ್ತು ಮಾನ್ಯ ಸದಸ್ಯರೇ ಹೇಳಿದ ಒತ್ತಾಯ ಶಿಕ್ಷಣ ಇವುಗಳನ್ನೆಲ್ಲಾ ಜಾರಿಗೆ ತರುತ್ತಾ ಹೋದರೆ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ವರ್ಷಕ್ಕೆ ಮೂರು ಲಕ್ಷ ಜನರನ್ನು ವಿದ್ಯಾವಂತರನ್ನಾಗಿ ಮಾಡಲು ಯಾವ ನಿರ್ದಿಷ್ಟವಾದ ಯೋಜನೆ ಮಾಡಿದ್ದೀರಿ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ಸ್ಕೂಲುಗಳಿಂದ ಆಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಸ್ಕೂಲುಗಳಿಂದಲ್ಲದೆ, ಅನಕ್ಷರತೆಯನ್ನು ನಿರ್ಮೂಲ ಮಾಡಬೇಕು ಹತ್ತು ವರ್ಷಗಳಲ್ಲಿ ಎಂದಿದೆ. ಈಗ 30 ಲಕ್ಷ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಲು, ವರ್ಷಕ್ಕೆ ಮೂರು ಲಕ್ಷ ಜನರನ್ನು ಅಕ್ಷರಸ್ಥರಾಗಿ ಮಾಡಲು ಏನು ಯೋಜನೆ ಮಾಡಿದ್ದೀರಿ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ಈಗ ವಯಸ್ಕರ ಶಿಕ್ಷಣ ಸಮಿತಿಯವರು ನಮ್ಮ ದೇಶದಲ್ಲಿ ಎಲ್ಲರನ್ನೂ ಅಕ್ಷರಸ್ಥರನ್ನು ಮಾಡಬಹುದೆಂದು ಒಂದು ಯೋಜನೆಯನ್ನು ಹಾಕಿದ್ದಾರೆ; ಅದರಂತೆ ಆಗಬಹುದೆಂದು ನಿರೀಕ್ಷಣೆ ಇದೆ.

ಶ್ರೀ ಬಿ. ಹುಚ್ಚೇಗೌಡರು.—Not a pious hope. ಈ ವರ್ಷ ಐದು ಲಕ್ಷ ವಯಸ್ಕರ ಶಿಕ್ಷಣಕ್ಕೆ ಕೊಟ್ಟಿದ್ದೀರಿ; ಹೀಗೆಯೇ ಏನೇನು ಮಾಡಿದ್ದೀರಿ? ನಿರ್ದಿಷ್ಟವಾದ ಯೋಜನೆ ಇದೆಯೆ ಎಂದು ನಾನು ಕೇಳುವುದು.

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ಸಾಧ್ಯವಾಗುತ್ತದೆಂದು ಸರ್ಕಾರಕ್ಕೆ ನಂಬಿಕೆ ಇದೆ. ಹಿಂದೆ ಒಂದು ಖೋತಾ ಸೂಚನೆಯು ಸಂಬಂಧವಾಗಿ ಹೇಳಿದ ಹಾಗೆ ಸರ್ಕಾರದವರು ವಯಸ್ಕರ ಶಿಕ್ಷಣಕ್ಕೆ ಗ್ಯಾರಂಟು ಕೊಡುತ್ತಿದ್ದಾರೆ. ಇಂಡಿಯಾ ಸರ್ಕಾರದವರೂ ಸಹಾಯ ಮಾಡಿದರೆ ಎಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಒಂದು ಯೋಜನೆ ತಯಾರುಮಾಡಿ ಕೆಲಸ ಮಾಡಿದರ ಹತ್ತು ವರ್ಷಗಳಲ್ಲಿ ಈ ಕಾರ್ಯ ಪೂರ್ಣವಾಗುವುದೆಂದು ನಂಬಿಕೆ ಇದೆ.

ಶ್ರೀ ಬಿ. ಹುಚ್ಚೇಗೌಡರು.—ಒತ್ತಾಯ ಪ್ರಾಥಮಿಕ ವಿದ್ಯಾಭ್ಯಾಸ ಪದ್ಧತಿ ಇದ್ದುದನ್ನೂ ತೆಗೆದುಹಾಕಿದ್ದೀರಿ. ಹೀಗಿರುವಾಗ ಅನಕ್ಷರತೆಯನ್ನು ಹೋಗಲಾಡಿಸುವುದು ಹೇಗೆ ಸಾಧ್ಯ?

The Hon'ble Sri R. CHENNIGARAMIAH.—It does not arise out of this question.

ಶ್ರೀ ಬಿ. ಹುಚ್ಚೇಗೌಡರು.—ಎಷ್ಟು ಮಾಡುತ್ತೀರಿ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ಎಷ್ಟು ಸಾಧ್ಯವೋ ಅಷ್ಟು ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು. –My question is definite.

The Hon'ble Sri R. CHENNIGARAMIAH.—The answer also is definite.

ಶ್ರೀ ಬಿ. ಹುಚ್ಚೇಗೌಡರು.—ಯಾವ ರೀತಿ ಮಾಡುತ್ತಾರೆಂಬುದನ್ನು ನಿರ್ದಿಷ್ಟವಾಗಿ ಹೇಳಲಿಲ್ಲ. ವರ್ಷಕ್ಕೆ ಇಷ್ಟಿಷ್ಟು ಸ್ಕೂಲುಗಳನ್ನು ಮಾಡುತ್ತೇವೆಂಬುದಕ್ಕೆ ನಿರ್ದಿಷ್ಟವಾದ ಯೋಜನೆ ಇದೆಯೆ ಎಂದು ನಾನು ಕೇಳುವುದು.

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ಇಂಡಿಯಾ ಸರ್ಕಾರದವರು ಕೊಡತಕ್ಕ ಹಣ, ನಾವು ಒದಗಿಸತಕ್ಕ ಹಣ ಇದೆಲ್ಲಕ್ಕೂ ಒಂದು ಯೋಜನೆಯನ್ನು ತಯಾರು ಮಾಡಿ ಹಣವನ್ನು ಯಾವ ರೀತಿ ವಿನಿಯೋಗ ಮಾಡಬೇಕೆಂಬ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಬೇಕೆಂಬ ಯೋಚನೆ ಇದೆ. ಇದೆಲ್ಲವನ್ನೂ ಮಾಡಿದರೆ ಪ್ರಯೋಜನವಾಗುತ್ತದೆಂದು ನಾನು ಹೇಳುವುದು.

ಶ್ರೀ ಬಿ. ಹುಚ್ಚೇಗೌಡರು.—ಈ ವರ್ಷ ಪ್ರೈಮರಿ ಸ್ಕೂಲು ಎಷ್ಟು ಕೊಡುತ್ತೀರೋ ಅಷ್ಟು ಹೆಚ್ಚು ಮಂದಿ ಅಕ್ಷರಸ್ಥರಾಗುತ್ತಾರೆ. ಹೀಗೆ ವರ್ಷಕ್ಕೆ ಎಷ್ಟೆಷ್ಟು ಕೊಟ್ಟರೆ ಎಷ್ಟು ವಿದ್ಯಾವಂತರ ಸಂಖ್ಯೆ ಹೆಚ್ಚಾಗುತ್ತದೆಂಬುದು ಗೊತ್ತಾಗುತ್ತದೆ. ಹೀಗೆ ಯೋಜನೆ ಇಲ್ಲವೆ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.— ವರ್ಷ ವರ್ಷವೂ ಪ್ರೈಮರಿ ಸ್ಕೂಲುಗಳು ಜಾಸ್ತಿಯಾಗುತ್ತವೆ; ವಯಸ್ಕರ ಶಿಕ್ಷಣ ಸಮಿತಿಯವರೂ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ; ಇದೆಲ್ಲವನ್ನೂ ಮಾಡುವುದರಿಂದ ಸಹಾಯವಾಗುತ್ತದೆಂಬ ನಂಬಿಕೆ ಇದೆ.

ಶ್ರೀ ಬಿ. ಹುಚ್ಚೇಗೌಡರು.— ಹೋದ ವರ್ಷಕ್ಕಿಂತ ಈ ವರ್ಷ ಕಡಿಮೆ ಸ್ಕೂಲುಗಳನ್ನು ಕೊಟ್ಟಿದ್ದೀರಿ; ಹೀಗಿರುವಾಗ ಹೇಗೆ ಸಾಧ್ಯ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಮತ್ತು ಎಕ್ಸೈಜು ಸಚಿವರು).— 1947ನೆಯ ಇನವಿ

ಯಲ್ಲಿ ಎಂಟೂವರೆ ಸಾವಿರ ಪ್ರೈಮರಿ ಸ್ಕೂಲುಗಳಿದ್ದವು, ಈ ವರ್ಷ ಹತ್ತುವರೆ ಸಾವಿರ ಇವೆ; ಎರಡು ಸಾವಿರ ಹೆಚ್ಚಿವೆ.

ಶ್ರೀ ಬಿ. ಹುಚ್ಚೇಗೌಡರು.—ಈ ಸಾಲಲ್ಲಿ ಎಷ್ಟು ಕೊಡಬೇಕೆಂದು ಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಡ್ಜೆಟ್ ನಿಮ್ಮ ಮುಂದಿದೆ, ನೋಡಿ ತಿಳಿದುಕೊಳ್ಳಬಹುದು.

ಶ್ರೀ ಬಿ. ಹುಚ್ಚೇಗೌಡರು.—ಮುಂದಿನ ವರ್ಷ ಎಷ್ಟು ಕೊಡುತ್ತೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡು ಲಕ್ಷ ರೂಪಾಯಿ ಒದಗಿಸಿದೆ; ಆದರಲ್ಲಿ ಎಷ್ಟಾಗುತ್ತದೆಯೋ ಅಷ್ಟನ್ನು ಕೊಡುತ್ತೇವೆ.

The Hon'ble Sri H. C. DASAPPA.—That again is taking the form of a regular debate. He should ask a question and get an answer. No arguing about the policy.

ಶ್ರೀ ಬಿ. ಹುಚ್ಚೇಗೌಡರು.—I am not discussing the policy. ಹಾಗಾದರೆ ಈ ಕೆಲಸ ಎಷ್ಟು ವರ್ಷಕ್ಕೆ ಮುಗಿದರೆ ಅಷ್ಟಕ್ಕೆ ಮುಗಿಯಬೇಕೆಂದು ಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಷ್ಟೇ ಕಾಲದಲ್ಲಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಜನಸಂಖ್ಯೆ ಮಾಲ್ತೂಸಿಯನ್ ಸಿದ್ಧಾಂತದ ಪ್ರಕಾರ ವರ್ಷವರ್ಷಕ್ಕೆ ಒಂದಕ್ಕೆ ಎರಡರಷ್ಟು, ಎರಡಕ್ಕೆ ನಾಲ್ಕರಷ್ಟು, ನಾಲ್ಕಕ್ಕೆ ಎಂಟರಷ್ಟರಂತೆ ಜಾಸ್ತಿಯಾಗುತ್ತಿದೆ!

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹತ್ತು ವರ್ಷಕ್ಕೆ ಪೂರೈಸಬೇಕೆಂದು ಒಂದು ಯೋಜನೆ ಇಟ್ಟುಕೊಂಡಿದ್ದೇವೆ. ಈಗ ಜನಸಂಖ್ಯೆ ಹೆಚ್ಚಿರುವ ದಾಪಾಷಾ ನೋಡಿದರೆ ಸ್ವಲ್ಪ ಜಾಸ್ತಿ ತರಬೇಕಾಗಬಹುದು.

ಶ್ರೀ ಬಿ. ಹುಚ್ಚೇಗೌಡರು.—ಪ್ಲಾನ್ ಎಂದು ಹೇಳಿದ್ದೀರಲ್ಲಾ, ಆ ಪ್ಲಾನ್ ಯಾವುದು?

Mr. SPEAKER.—They have given the information. The Hon'ble Member in evidently not satisfied with it and is desirous of discussing it during the question time. He may do so on some other occasion.

ಶ್ರೀ ಬಿ. ಹುಚ್ಚೇಗೌಡರು.—ಪ್ಲಾನ್ ಎಂದು ಹೇಳಿದರಲ್ಲಾ ಅದು ಯಾವುದು ಎಂಬುದನ್ನು ಹೇಳಲಿಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗಲೇ ಹೇಳಿದೆನಲ್ಲಾ! ವಯಸ್ಕರ ವಿದ್ಯಾಭ್ಯಾಸ ಕೌನ್ಸಿಲ್ಲಿನವರು ಒಂದು ಪ್ಲಾನ್ ಮಾಡಿಕೊಂಡಿದ್ದಾರೆ. ಇದಕ್ಕೆ ಮೈಸೂರು ಸರ್ಕಾರದವರು 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇಂಡಿಯಾ ಸರ್ಕಾರದವರೂ 5 ವರ್ಷಗಳಲ್ಲಿ ವರ್ಷ ಒಂದಕ್ಕೆ 8 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದಿದ್ದಾರೆ. ಇಷ್ಟು ಹಣವನ್ನೂ ಉಪಯೋಗಿಸಿ ವಿದ್ಯಾಭ್ಯಾಸ ಕೊಡಬೇಕೆಂದು ಒಂದು ಪ್ಲಾನ್ ಹಾಕಿಕೊಂಡಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—$2\frac{3}{4}$ ಲಕ್ಷ ಜನರನ್ನು ಈ ಹತ್ತು ವರ್ಷಗಳಲ್ಲಿ ಆಕ್ಷರಸ್ಥರನ್ನಾಗಿ ಮಾಡಿದ್ದೇವೆಂದು ಹೇಳಿದ್ದೀರಿ. ಇದಕ್ಕೆ ಎಷ್ಟು ಖರ್ಚಾಗಿದೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್ ಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು.—28·6 ಲಕ್ಷ ಜನರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಹತ್ತು ವರ್ಷ ಬೇಕೆಂದು ಹೇಳಿ ಒಂದು ಪ್ಲಾನ್ ಮಾಡಿಕೊಂಡಿದ್ದೇವೆಂದು ಹೇಳಿದ್ದೀರಿ. ಇದಕ್ಕೆ ಎಷ್ಟು ಖರ್ಚಾಗುತ್ತದೆಂದು ಕೌನ್ಸಿಲನವರು ಹೇಳಿದ್ದಾರೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನೆಲ್ಲಾ ಮಾಡಿದೆ. ಅಂಕಿ ಅಂಶಗಳನ್ನು ಈಗ ಹೇಳುವುದಕ್ಕಾಗುವುದಿಲ್ಲ.

Mr. SPEAKER.—Short Notice Question. Sri Govinda Reddy.

Rehabilitation and re-employment of displaced military personnel of the integrated Mysore State Forces.

ಪ್ರಶ್ನೆ 5.—ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರ ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಭಾರತ ಸೈನ್ಯದೊಡನೆ ಸೇರಿಸಲಾದ ಮೈಸೂರು ಸಂಸ್ಥಾನದ ಸೈನ್ಯಪಡೆಗಳಲ್ಲಿದ್ದ ಹುದ್ದೆಗಳಿಂದ ನಿವೃತ್ತಿಗೊಳಿಸಲ್ಪಟ್ಟ 'ಮಿಲಿಟರಿ' ನೌಕರರುಗಳ ವಿಷಯವಾಗಿ ಸರ್ಕಾರದವರು ಇದೇ ತಿಂಗಳು 23 ನೆಯ ತಾರೀಖಿನಿಂದೀಚೆಗೆ, ಇಂಡಿಯಾ ಸರ್ಕಾರದ "ಸ್ಪೆಷಲ್ ಮಿನಿಸ್ಟ್ರಿ"ಯ ಸೆಕ್ರೆಟರಿಯವರಾದ ಮಿ॥ ವಿ. ಪಿ. ಮೆನನ್‌ರವರೊಡನೆ ಮಾತುಕತೆ ನಡೆಯಿಸಿರುತ್ತಾರೆಯೆ;

(b) ನಡೆಯಿಸಿದ್ದಲ್ಲಿ ಅಂಥ ನೌಕರರ ವಿಚಾರವನ್ನು ಪುನರ್ವ್ಯವಸ್ಥೆಗೊಳಿಸುವ ವಿಷಯವನ್ನೂ, ಅವರಿಗೆ ಬೇರೆ ನೌಕರಿಗಳನ್ನು ಕೊಡಿಸಿಕೊಡುವ ವಿಷಯವನ್ನೂ ಚರ್ಚಿಸಲಾಯಿತೆ;

(c) ಯಾವುದಾದರೂ ತೀರ್ಮಾನಗಳನ್ನು ಮಾಡಲಾಯಿತೆ;

(d) ಆ ನೌಕರರುಗಳ ವಿಚಾರವನ್ನು ಪುನರ್ವ್ಯವಸ್ಥೆಗೊಳಿಸುವ ವಿಷಯದಲ್ಲೂ ಮತ್ತು ಹೆಚ್ಚಳಗಳ ವಿಚಾರದಲ್ಲೂ ಮೈಸೂರು ಸರ್ಕಾರದವರು ಈ ಹಿಂದೆಯೇ ರೂಪಿಸಿದ್ದ ಸಲಹೆಗಳನ್ನು ಆ ಮಾತುಕತೆಗಳ ಸಂದರ್ಭದಲ್ಲಿ ಚರ್ಚಿಸಲಾಯಿತೆ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—

(a) ಹೌದು; ನಡೆಯಿಸಿರುತ್ತಾರೆ, ಇದೇ ಮಾರ್ಚಿ 24ನೆಯ ಮತ್ತು 25ನೆಯ ತಾರೀಖುಗಳಲ್ಲಿ

(b) ಹೌದು; ಚರ್ಚಿಸಲಾಯಿತು

(c) ಹೌದು; ಮಾಡಲಾಯಿತು

(d) ಹೌದು; ಚರ್ಚಿಸಲಾಯಿತು

ಶ್ರೀ ಎಂ. ಗೋವಿಂದರೆಡ್ಡಿಯವರು.—ಶ್ರೀ ವಿ. ಪಿ. ಮೆನನ್‌ರವರೊಡನೆ ಮೈಸೂರು ಸರ್ಕಾರದ ಪರವಾಗಿ ಮಾತುಕತೆ ನಡೆಸಿದವರು ಯಾರ್ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಹಣಕಾಸಿನ ಸಚಿವರು, ಮಾನ್ಯ ಒಳಾಡಳಿತ ಸಚಿವರು ಮತ್ತು ಚೀಫ್ ಸೆಕ್ರೆಟರಿಯವರು.